KASM630010952022

Presented on : 08-09-2022
Registered on : 08-09-2022
Decided on : 14-08-2026
Duration : 03 years, 11months, 06days

# ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು** :

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.

ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

**ದಿನಾಂಕಃ 14 ನೇ ಆಗಸ್ಟ್ 2026**

**ಸಿ.ಸಿ.ಸಂಖ್ಯೆ 839/2022**

| | |
|---|---|
| ಫಿರ್ಯಾದುದಾರರು | ರಾಜ್ಯ ಸರ್ಕಾರದ ಪರವಾಗಿ, ಸಾಗರ ಗ್ರಾಮಾಂತರ ಪೋಲಿಸ್ ಠಾಣೆ. |
| | *(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)* |
| *** ***ವಿರುದ್ಧ*** *** | |
| ಆರೋಪಿತರು | 1. ಚೇತನ್ ಶೆಟ್ಟಿ ಬಿನ್ ರಾಜಪ್ಪ<br>ವಯಸ್ಸು 27 ವರ್ಷ,<br>ವಾಸಃ ವಿನೋಬ ನಗರ<br>ಸಾಗರ ತಾಲ್ಲೂಕು, ಶಿವಮೊಗ್ಗ. |

| | |
|---|---|
| | 2. ರವಿ ಕುಮಾರ ಯಾನೆ ರೇಣುಕ ಬಿನ್ ಚಿಕ್ಕಣ್ಣ,<br>ವಯಸ್ಸು 32 ವರ್ಷ,<br>ವಾಸಃ ವಿನೋಬ ನಗರ,<br>ಸಾಗರ ತಾಲ್ಲೂಕು, ಶಿವಮೊಗ್ಗ.<br>(ಪ್ರತಿನಿಧಿಸಿದವರು ***ಎಂ ಬಿ ಜಿ.,*** ವಕೀಲರು) |
| ಅಪರಾಧ ನಡೆದ ದಿನಾಂಕ | 31.01.2022 |
| ಅಪರಾಧ ವರಧಿಯಾದ ದಿನಾಂಕ | 31.01.2022 |
| ಪಿರ್ಯಾದುದಾರರ ಹೆಸರು | ಲೋಕೇಶ |
| ಸಾಕ್ಷಿ ವಿಚಾರಣೆ ಪ್ರಾರಂಭ ದಿನಾಂಕ | 21.07.2026 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 21.07.2026 |
| ಆರೋಪಿತರ ಮೇಲೆ ಹೊರಿಸಿದ ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 323,324, 504 ಮತ್ತು 506 ಸಹವಾಚಕ ಕಲಂ 34 |
| ನ್ಯಾಯಾಲಯದ ಆದೇಶ | *ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.* |

# ತೀರ್ಪು

1. ಸರ್ಕಾರದ ಪರವಾಗಿ ಠಾಣಾಧಿಕಾರಿಗಳು, ಗ್ರಾಮಾಂತರ ಪೋಲೀಸ್ ಠಾಣೆ, ಸಾಗರ ತಾಲ್ಲೂಕು ಇವರು, ತಮ್ಮ ಠಾಣಾ ಗುನ್ನಾ ಸಂಖ್ಯೆ 60/2022 ರಂತೆ

ಪ್ರಕರಣವನ್ನು ನೊಂದಾಯಿಸಿಕೊಂಡು, ತನಿಖೆ ಮಾಡಿ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿನ ಆರೋಪಗಳಿಗಾಗಿ ದಂಡಿಸಬಹುದಾದ ಅಪರಾಧವನ್ನು ಎಸಗಿದ್ದಾರೆ ಎಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕ 31.01.2022 ರಂದು ಸಂಜೆ 05.30 ಗಂಟೆಯ ಸಮಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಶಿರೂರು-ಆಲಳ್ಳಿ ಗ್ರಾಮದ ಅಂಬೇಶ ರವರ ಆರ್ ಕೆ ಹೋಟೆಲ್ ಹತ್ತಿರ ರಸ್ತೆ ಪಕ್ಕದಲ್ಲಿ, ಸಾಕ್ಷಿ 1 ರಿಂದ 3 ರವರು ಹೋಟೆಲ್ ನಲ್ಲಿ ಟೀ ಕುಡಿದು ಹೊರಗೆ ಬಂದಾಗ, 1 ನೇ ಮತ್ತು 2 ನೇ ಆರೋಪಿತರು ಸಿಗರೇಟು ಸೇದಿ ಹೊಗೆಯನ್ನು ಸಾಕ್ಷಿ 1 ರವರ ಮುಖಕ್ಕೆ ಬಿಟ್ಟಿದ್ದು, ಸಾಕ್ಷಿ 1 ರವರು ಏಕೆ ಅಂತೆ ಕೇಳಿದಾಗ, ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಬಿದ್ದಿದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಸಾಕ್ಷಿ 1 ರವರ ಎಡಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಸಾಕ್ಷಿ 1 ರವರಿಗೆ ಕೈಯಿಂದ ಮುಖಕ್ಕೆ ಮೂಗಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಕೊಲೆ ಬೆದರಿಕೆ ಹಾಕಿರುತ್ತಾರೆಂಬುದು ತಮ್ಮ ತನಿಖೆಯಿಂದ ದೃಢಪಟ್ಟಿರುವುದರಿಂದ, ಸದರಿ

ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದರಿಂದ, ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ, ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3. ಆರೋಪಿತರಿಗೆ ಸಮನ್ಸ್ ಜಾರಿ ಮಾಡಲಾಗಿ, ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿದ್ದು, ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯಕ್ಕೆ ಅಗತ್ಯವಾದ ಜಾಮೀನು ನೀಡಿದ್ದರಿಂದ, ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

4. ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.207ರ ರ ರೀತಿ ಅಗತ್ಯಪಡಿಸಿರುವಂತೆ, ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ನಂತರ, ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಈ ಹಂತದಲ್ಲಿ ಆರೋಪಿತರ ವಿರುದ್ಧ ಆಪಾದನೆ/ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಸಾಧನಗಳು ಲಭ್ಯವಿದ್ದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿನ ಆರೋಪಗಳಿಗೆ ಅವರ ವಿರುದ್ಧದ ಆಪಾದನೆ/ದೋಷಾರೋಪಣೆಯನ್ನು ತಯಾರಿಸಿ, ಒದಿ ವಿವರಿಸಲಾಗಿ, ಆರೋಪಿತರು ತಮ್ಮ ವಿರುದ್ಧದ

ಆರೋಪಗಳನ್ನು ಅಲ್ಲಗಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

5. ಅಭಿಯೋಜನೆಯು ಆರೋಪಿತರ ವಿರುದ್ಧ ಇರುವ ಆರೋಪಗಳನ್ನು ರುಜುವಾತು ಪಡಿಸಲು, ಫ್ರಾಸಾ-1 ರವರ ನುಡಿ ಸಾಕ್ಷ್ಯವನ್ನು ಮಾಡಿಕೊಂಡಿದ್ದು, ನಿಪಿ.1 ಮತ್ತು 2 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ವಿಚಾರಣೆ ಮಾಡಲಾದ ಸಾಕ್ಷಿದಾರರಾದ, ಫ್ರಾಸಾ.1 ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ, ಅವರನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈ ಬಿಡಲಾಗಿದೆ.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು.

7. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ದಿನಾಂಕ 31.01.2022 ರಂದು ಸಂಜೆ 05.30 ಗಂಟೆಯ ಸಮಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಶಿರೂರು-ಆಲಳ್ಳಿ ಗ್ರಾಮದ ಅಂಬೇಶ ರವರ ಆರ್ ಕೆ ಹೋಟೆಲ್ ಹತ್ತಿರ ರಸ್ತೆ ಪಕ್ಕದಲ್ಲಿ ಸಾಕ್ಷಿ 1 ರಿಂದ 3 ರವರು ಹೋಟೆಲ್ ನಲ್ಲಿ ಟೀ ಕುಡಿದು ಹೊರಗೆ ಬಂದಾಗ, 1 ನೇ ಮತ್ತು 2 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ, ಸಿಗರೇಟು ಸೇದಿ ಹೋಗೆಯನ್ನು ಸಾಕ್ಷಿ 1 ರವರ ಮುಖಕ್ಕೆ ಬಿಟ್ಟಿದ್ದು, ಸಾಕ್ಷಿ 1 ರವರು ಏಕೆ ಅಂತೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಎರಡನೇಯದಾಗಿ, ಮೇಲ್ಕಂಡ ದಿನಾಂಕಃ, ಸಮಯ, ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಸಾಕ್ಷಿ 1 ರವರಿಗೆ ಅಲ್ಲೇ ಬಿದ್ದಿದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಸಾಕ್ಷಿ 1 ರವರ ಎಡಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂದು

ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೂರನೇಯದಾಗಿ, ಮೇಲ್ಕಂಡ ದಿನಾಂಕಃ, ಸಮಯ, ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಸಾಕ್ಷಿ 1 ರವರಿಗೆ ಕೈಯಿಂದ ಮುಖಕ್ಕೆ ಮೂಗಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕಃ, ಸಮಯ, ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಸಾಕ್ಷಿ1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

5. ಹಾಗಿದ್ದರೆ ಯಾವ ಆದೇಶ?

8. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆಃ

**ಅಂಶ. 1 ರಿಂದ 4 : ನಕಾರಾತ್ಮಕವಾಗಿ,**

**ಅಂಶ. 5** : ಈ ಕೆಳಕಂಡ ಕಾರಣಗಳಿಂದಾಗಿ
ಅಂತಿಮ ಆದೇಶದಂತೆ,

## <u>ಕಾರಣಗಳು</u>

9. <u>**ಅಂಶ 1 ರಿಂದ 4**</u>:- ಈ ಅಂಶಗಳ ಮೇಲಿನ ಚರ್ಚೆಯು, ಒಂದರ ಮೇಲೆ ಇನ್ನೊಂದು ಅವಲಂಭಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ದಿನಾಂಕ 31.01.2022 ರಂದು ಸಂಜೆ 05.30 ಗಂಟೆಯ ಸಮಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಶಿರೂರು-ಆಲಳ್ಳಿ ಗ್ರಾಮದ ಅಂಬೇಶ ರವರ ಆರ್ ಕೆ ಹೋಟೆಲ್ ಹತ್ತಿರ ರಸ್ತೆ ಪಕ್ಕದಲ್ಲಿ ಸಾಕ್ಷಿ 1 ರಿಂದ 3 ರವರು ಹೋಟೆಲ್ ನಲ್ಲಿ ಟೀ ಕುಡಿದು ಹೊರಗೆ ಬಂದಾಗ, 1 ನೇ ಮತ್ತು 2 ನೇ ಆರೋಪಿತರು ಸಿಗರೇಟು ಸೇದಿ ಹೊಗೆಯನ್ನು ಸಾಕ್ಷಿ 1 ರವರ ಮುಖಕ್ಕೆ ಬಿಟ್ಟಿದ್ದು, ಸಾಕ್ಷಿ 1 ರವರು ಏಕೆ ಅಂತೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಬಿದ್ದಿದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಸಾಕ್ಷಿ 1 ರವರ ಎಡಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಸಾಕ್ಷಿ 1 ರವರಿಗೆ ಕೈಯಿಂದ ಮುಖಕ್ಕೆ ಮೂಗಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಕೊಲೆ ಬೆದರಿಕೆ

ಹಾಕಿರುತ್ತಾರೆಂಬುದು ತಮ್ಮ ತನಿಖೆಯಿಂದ ದೃಢಪಟ್ಟಿರುವುದರಿಂದ, ಸದರಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂಬುದು ಅಭಿಯೋಜನೆಯ ನಿಲುವು ಆಗಿದೆ.

11. ಪ್ರಾಸಾ-1 ರವರು ಸದರಿ ಪ್ರಕರಣದ ದೂರುದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಜಗಳವಾಗಿರುವುದಿಲ್ಲ. ಆರೋಪಿತರು ತನಗೆ ಹೊಡಿ ಬಡಿ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ. ಜೀವ ಬೆದರಿಕೆ ಹಾಕಿರುವುದಿಲ್ಲ ಎಂದು ಪ್ರಾ.ಸಾ-1 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತದನಂತರ, ಅಭಿಯೋಜನೆಯು ಪ್ರಾಸಾ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ, ಸದರಿ ಸಾಕ್ಷಿದಾರರಿಂದ, ಅಭಿಯೋಜನೆಯನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಿಲ್ಲ.

12. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ, ಅಭಿಯೋಜನೆಯ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ, ಪ್ರಾಸಾ- 1 ರವರು ಅಭಿಯೋಜನೆಯನ್ನು ಬೆಂಬಲಿಸದೆ ಪ್ರತಿಕೂಲ ಹೊಂದಿದ್ದು, ಇದು ಅಭಿಯೋಜನೆಗೆ

ಆಘಾತಕಾರಿಯಾಗಿರುತ್ತದೆ. ಸದರಿ ಸಾಕ್ಷಿದಾರರು ಆರೋಪಿತರು ಸದರಿ ಕೃತ್ಯವನ್ನು ಎಸಗಿರುತ್ತಾರೆಂದು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಅದೇರೀತಿಯಾಗಿ, ಸದರಿ ಆರೋಪಿತರು ಚಾ.ಸಾ.1 ರವರನ್ನು ಅವಾಚ್ಯವಾಗಿ ಬೈದರು ಎಂದಾಗಲಿ, ಅವರ ಮೇಲೆ ಹಲ್ಲೆ ಮಾಡಿದರು ಎಂದಾಗಲಿ ಹೇಳಿರುವುದಿಲ್ಲ. ಆದುದ್ದರಿಂದ, ಅಭಿಯೋಜನಾ ಪ್ರಕರಣದ ಬಗ್ಗೆ ಸಂಶಯ ಉಂಟಾಗುತ್ತದೆ ಹಾಗೂ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇಲ್ಲವೆಂದು ಕಂಡು ಬರುತ್ತದೆ. ಇದರಿಂದಾಗಿ ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತದೆ. ಆದಕಾರಣ, ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಪಟ್ಟು, ಮೇಲಿನ ಅಂಶ ನಂ.1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

13. **ಅಂಶ 5:** ಮೇಲ್ಕಂಡ ಚರ್ಚೆಯಲ್ಲಿ ಅಂಶ–1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ ಆರೋಪಿತರು ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ. 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪಿತರ ವಿರುದ್ಧ

ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿನ ಆರೋಪಗಳಿಂದ ಆರೋಪಿತರನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆಗೊಳಿಸಿದೆ.

ಆರೋಪಿತರು ಮತ್ತು ಅವರ ಜಾಮೀನುದಾರನು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.437(ಎ) ನಂತೆ ಮುಂದಿನ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲು ಪಟ್ಟಿ ಸಂಖ್ಯೆ 45/2022 ರಂತೆ ದಿನಾಂಕ 02.02.2022 ರಂದು ಅಮಾನತ್ತು ಪಡಿಸಿಕೊಂಡಿರುವ 23 ಇಂಚು ಉದ್ದದ ಕಬ್ಬಿಣದ ರಾಡ್ ಅಲ್ಪ ಬೆಲೆಯುಳ್ಳ ವಸ್ತುವಾಗಿರುವುದರಿಂದ ಅಪೀಲು ಅವಧಿ ಮುಗಿದ ನಂತರ ಅದನ್ನು ಮಾರಾಟ ಮಾಡಿ ಬಂದ ಹಣವನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ ನಂತರ ತಪ್ಪುಗಳನ್ನು ಅದನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 14 ನೇ ಆಗಸ್ಟ್, 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

**(ಮಾದೇಶ ಎಂ.ವಿ.,)**
ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಾಗರ.

## ಅನುಬಂಧ

**1. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

ಪ್ರಾ.ಸಾ-1 ಲೋಕೇಶ.

**2. ಅಭಿಯೋಜನೆಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:**

ನಿಪಿ-1 ದೂರು.

ನಿಪಿ-2 ಸ್ಥಳ ಪಂಚನಾಮೆ.

**3. ಅಭಿಯೋಜನೆಯ ಪರ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿ:**

- ಏನೂ ಇಲ್ಲ -

**4. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

- ಏನೂ ಇಲ್ಲ -

**5. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:**

- ಏನೂ ಇಲ್ಲ -

**ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್**
**ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಗರ.**